# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

## ಸಿ.ಸಿ. ನಂ. 633/2015

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ರಾಜು | ಸಿಡಬ್ಲ್ಯೂ-1 | ಪಿಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | ಭೀಮಶೇನ ಬೈಲಪತ್ತರ | | |
| ವಯಸ್ಸು | 38 ವರ್ಷ | | |
| ಉದ್ಯೋಗ | ವ್ಯಾಪಾರ | | |
| ವಾಸ ಸ್ಥಳ | ಶ್ರೀನಿವಾಸಸರಡಗಿ, ತಾಃಜಿಃ ಕಲಬುರಗಿ | | |

ದಿನಾಂಕ 12-09-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು ಸೇಡಂದ ಚಿಂಚೋಳ್ಳಿ ಕ್ರಾಸ ಇಲ್ಲಿ ಸಿದ್ರಾಮೇಶ್ವರ ಇತನ ಮನೆಯಲ್ಲಿ ಬಾಡಿಗೆಯಿಂದ ವಾಸ ಇರುತ್ತೇನೆ. ಈಗ 5-6 ವರ್ಷಗಳ ಹಿಂದೆ ರಾತ್ರಿ 10.30 ಗಂಟೆಗೆ ಮನೆಯಲ್ಲಿ ಊಟ ಮಾಡಿ ಕುಳಿತ್ತಿದ್ದು ಇತ್ತು. ಆರೋಪಿ ತನ್ನ ಹೆಂಡತಿಯೊಂದಿಗೆ ಜಗಳ ಆಡುತ್ತಿದ್ದನು. ಆಗ ನಾನು ಜಗಳ ಕೇಳಿ ಬಿಡಿಸಲು ಹೋಗಿರುತ್ತೇನೆ. ಆಗ ಆರೋಪಿ ನನಗೆ ಕಲ್ಲಿನಿಂದ ಎಡಗಣ್ಣಿನ ಮೇಲೆ ಹೊಡೆದಿರುತ್ತಾನೆ. ಆಗ ನಾನು ಬೇಹೋಷ ಆಗಿದ್ದು ನನ್ನನ್ನು ಗುಲಬರ್ಗಾ ಆಸ್ಪತ್ರೆಗೆ ಸೇರಿಕೆ ಮಾಡಿರುತ್ತಾರೆ. ಆಸ್ಪತ್ರೆಯಲ್ಲಿ 15 ದಿವಸಗಳವರೆಗೆ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಕಲ್ಲನ್ನು ಗುರುತಿಸುತ್ತಾರೆ. ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಜಗಳ ವಿಷಯ ನಾನು ನಮ್ಮ ಮನೆ ಮಾಲೀಕರಿಗೆ ತಿಳಿಸಿರುತ್ತೇನೆ. ನಾನು ಯಾವುದೇ ಕಾಗದದ ಮೇಲೆ ಸಹಿ ಮಾಡಿಲ್ಲ. ಪೊಲೀಸರು ನನ್ನ ಸಹಿಯನ್ನು ಮನೆಯಲ್ಲಿ ಪಡೆದುಕೊಂಡಿರುತ್ತಾರೆ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನ್ನ ಅಳಿಯ ಆನಂದಕುಮಾರ ಇತ ಚಿಂಚೋಳ್ಳಿ ಕ್ರಾಸದಲ್ಲಿರುವ ಶೇಂಗಾ ವ್ಯಾಪಾರ ಮಾಡುವ ಸುಭಾಶ ಬೈಲಪತ್ತರ ಇತನು ಇಲ್ಲದ ಸಮಯದಲ್ಲಿ ಆನಂದನು ಎರಡು ದಿನ ಶೇಂಗಾ

ವ್ಯಾಪಾರ ಮಾಡಿದ್ದನು ಎಂದರೆ ಸರಿ. ಆಗ ದಿನಾಂಕ 26.06.2015 ರಂದು ಮುಂಜಾನೆ 11.30 ಗಂಟೆಗೆ ಆನಂದಕುಮಾರ ಇತನಿಗೂ ಸುಭಾಶ ಇತನಿಗೂ ಬಾಯಿ ಮಾತಿನ ಜಗಳ ಆಗಿತ್ತು ಎಂದರೆ ಸರಿ. ಅದೇ ದಿವಸ ರಾತ್ರಿ 10.15 ಗಂಟೆಗೆ ನಾನು ಊಟ ಮಾಡುತ್ತಿದ್ದಾಗ ನಮ್ಮ ಮನೆಯ ಎದುರುಗಡೆ ಅಳಿಯ ಆನಂದಕುಮಾರ ಇತನ ಜಗಳ ಸಪ್ಪಳ ಕೇಳಿರುತ್ತೇನೆ ಎಂದರೆ ಸರಿ. ಆಗ ಆನಂದಕುಮಾರ ಮತ್ತು ಸುಭಾಶ ಇಬ್ಬರೂ ಬಾಯಿ ಮಾತಿನ ಜಗಳ ಆಡುತ್ತಿದ್ದರು ಎಂದರೆ ಸರಿಯಲ್ಲ. ಆಗ ನಾನು ಜಗಳ ಬಿಡಿಸಲು ಹೋದಾಗ ಆನಂದಕುಮಾರ ಇತ ನನಗೆ ರಂಡೀ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಹೊಡೆಯಹತ್ತಿದನು ಎಂದರೆ ಸರಿಯಲ್ಲ. ಆಗ ನಾನು ಅವನಿಂದ ಬಿಡಿಸಿಕೊಂಡು ಹೋಗುವಷ್ಟರಲ್ಲಿ ಆನಂದಕುಮಾರ ಇತ ಅಲ್ಲಿಯೇ ಬಿದಿದ್ದ ಕಲ್ಲನ್ನು ತೆಗೆದುಕೊಂಡು ನನ್ನ ಎಡಗಣ್ಣಿನ ಹುಬ್ಬಿನ ಮೇಲೆ ಬಲಗಣ್ಣಿನ ಹುಬ್ಬಿನ ಮೇಲೆ ಹಾಗೂ ಮೂಗಿನ ಮೇಲೆ ಹೊಡೆದು ಗಾಯ ಮಾಡಿರುತ್ತಾನೆ ಎಂದರೆ ಸರಿ. ಅದೇ ರೀತಿ ನನಗೆ ಅವನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ದಮಕಿ ಹಾಕಿರುತ್ತಾನೆ ಎಂದರೆ ಸರಿ. ಆಗ ನನ್ನ ಹೆಂಡತಿ ರಾಜಶ್ರೀ ಹಾಗೂ ಪರಮೇಶ, ಶಾಂತಮ್ಮ ಇವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಜಗಳ ಆದಾಗ ರಾತ್ರಿ 10.30 ಆಗಿತ್ತು ಎಂದರೆ ಸರಿ. ನನ್ನನ್ನು ನನ್ನ ಹೆಂಡತಿ ಉಪಚಾರಕ್ಕೆಂದು ಸೇಡಂ ಸರಕಾರಿ ಆಸ್ಪತ್ರೆಗೆ ಸೇರಿಕೆ ಮಾಡಿರುತ್ತಾಳೆ ಎಂದರೆ ಸರಿ. ಆಗ ಆಸ್ಪತ್ರೆಗೆ ಪೊಲೀಸರು ಬಂದಿದ್ದು ಆಗ ನಾನು ಜಗಳದ ವಿಷಯ ಹೇಳಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿ ದೂರಿನ ಮೇಲಿರುವ ಸಹಿಯನ್ನು ಗುರುತಿಸುತ್ತಾರೆ. ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಆರ್.ಜಿ.ಎಸ್. ಆರೋಪಿ ಪರ ವಕೀಲರಿಂದ**

ನಾನು, ಆರೋಪಿ ಮತ್ತು ಸುಭಾಶ ಇವರು ನೆಂಟರಾಗಬೇಕು ಎಂದರೆ ಸರಿ. ತಂಟೆ ಆಗಿದೆ ಎನ್ನಲಾದ ಸ್ಥಳಕ್ಕೆ ಚಿಂಚೋಳ್ಳಿ ಕ್ರಾಸ್, ಭವಾನಿ ನಗರ ಎಂದು ರೂಡಿಗತವಾಗಿ ಕರೆಯುತ್ತಾರೆ. ಜಗಳ ಸುಭಾಶ ಮತ್ತು ಆನಂದಕುಮಾರ ಇವರ ನಡುವೆ ಇತ್ತು ಮತ್ತು ನನ್ನ ನಡುವೆ ಇರಲಿಲ್ಲ ಎಂದರೆ ಸರಿ. ಸುಭಾಶ ಇತ ಚಿಂಚೋಳ್ಳಿ ಕ್ರಾಸದಲ್ಲಿ ಶೇಂಗಾ ಮಾರುತ್ತಿದ್ದ ಮತ್ತು ಆತ ಎರಡು ದಿವಸ ಇಲ್ಲದ್ದರಿಂದ ಆರೋಪಿ ಶೇಂಗಾ ಮಾರಾಟ ಮಾಡಿದ್ದ ಎಂದರೆ ಸರಿ. ಸುಭಾಶನ ಮನೆ ಚಿಂಚೋಳ್ಳಿ ಕ್ರಾಸದಲ್ಲಿ ನಮ್ಮ ಮನೆ ಬಿಟ್ಟು ದೂರ ಇರುತ್ತದೆ. ನಾನು ತಂಟೆಯ ಸ್ಥಳದ ಚಿಂಚೋಳ್ಳಿ ಕ್ರಾಸ್ ಭವಾನಿ ನಗರ ಎಂದು ಹೇಳಿರುತ್ತೇನೆ ಎಂದರೆ ಸರಿ. ನನ್ನ ಮನೆಗೂ ಸುಭಾಶ ಇತನ ಮನೆಗೂ ಕಾಲ್ನಡಿಗೆಯಲ್ಲಿ ಹೋದರ 5 ನಿಮೀಷದಲ್ಲಿ ಹೋಗಬಹುದು. ಆರೋಪಿ ನಮ್ಮ ಮನೆಯಲ್ಲಿ ವಾಸ ಇದ್ದ. ನನಗೂ ಆರೋಪಿಗೂ ಒಳ್ಳೆಯ ಸಂಬಂಧ ಇರುತ್ತದೆ ಎಂದರೆ ಸರಿ.

ಆರೋಪಿ ಮತ್ತು ಸುಭಾಶ ಇತನ ನಡುವೆ ಜಗಳ ನಡೆದಿತ್ತು ಎಂದು ಹೇಳಿದ್ದು ಅದರ ಕುರಿತು ಸುಭಾಶ ಆರೋಪಿಯ ಮೇಲೆ ದೂರು ಸಲ್ಲಿಸಿಲ್ಲ. ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯನ್ನು ರಾತ್ರಿ 12.30 ಕ್ಕೆ ಘಟನೆ ಆಗಿರುವುದಾಗಿ ಹೇಳಿರುತ್ತೇನೆ ಎಂದರೆ ಸರಿ. ನಾನು ಹೇಳಿದ ಘಟನೆಗೂ ಮತ್ತು 12.30 ಗಂಟೆಗೂ ಸಾಕಷ್ಟು ವ್ಯತ್ಯಾಸ ಇರುತ್ತದೆ ಎಂದರೆ ಸರಿ. ರಾತ್ರಿ 10.30 ಕ್ಕೆ ಯಾವುದೇ ಘಟನೆಯಾಗಿಲ್ಲ ಎಂದರೆ ಸರಿಯಲ್ಲ. ನನ್ನ ಅಳಿಯ ಆನಂದಕುಮಾರ, ಸುಭಾಶ ಇತನೊಂದಿಗೆ ಜಗಳವಾಡುತ್ತಿದ್ದಾಗ ನಾನು ಜಗಳ ಬಿಡಿಸಲು ಹೋಗಿರುತ್ತೇನೆ ಎಂದರೆ ಸರಿ. ಜಗಳ ಬಿಡಿಸಲು ಹೋದಾಗ ನಾನು, ಆರೋಪಿ ಮತ್ತು ಸುಭಾಶ ಮಾತ್ರ ಇದ್ದೇವು . ಆಗ ಬೇರೆ ಯಾರು ಹಾಜರು ಇರಲಿಲ್ಲ. ಜಗಳ ನಮ್ಮ ಮನೆಯ ಮುಂದೆ ಆಗಿರುತ್ತದೆ. ಆಗ ನಮ್ಮ ಮನೆಯ ಮುಂದೆ ದೀಪದ ಬೆಳಕು ಇತ್ತು. ಆರೋಪಿಯನ್ನು ನಮ್ಮ ಮನೆಯ ಮಾಲೀಕ ಹಿಡಿದಿರುತ್ತಾರೆ. ನಮ್ಮ ಮನೆಯ ಮಾಲೀಕರ ಹೆಸರನ್ನು ನಿಪಿ-1 ರಲ್ಲಿ ಕಾಣಿಸಿರುತ್ತೇನೆ. ನನ್ನ ಮತ್ತು ಆರೋಪಿಯ ಸಂಬಂಧ ತಂಟೆ ನಡೆಯುವುದಕ್ಕಿಂತ ಮುಂಚೆ ಚೆನ್ನಾಗಿತ್ತು ಎಂದರೆ ಸರಿ. ಆರೋಪಿ ನನಗೆ ಹೊಲಸು ಬೈದಿರುವುದಾಗಿ ನಾನು ನಿಪಿ-1 ರಲ್ಲಿ ಹೇಳಿಲ್ಲ. ಆರೋಪಿ ನನಗೆ ಎಡಗಣ್ಣಿನ ಹುಬ್ಬಿನ ಮೇಲೆ ಕಲ್ಲಿನಿಂದ ಹೊಡೆದಿರುತ್ತಾನೆ. ಮು.ಮಾ.1 ರಿಂದ ಬಡೆದರೆ ಏನು ಆಗುವುದಿಲ್ಲ, ಏನು ಗಾಯ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಕೆಳಗೆ ಬಿದ್ದು ಪೆಟ್ಟು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಎಡಗಣ್ಣಿಗೆ ಮಾತ್ರ ಕಲ್ಲಿನಿಂದ ಹೊಡೆದಿರುತ್ತಾನೆ ಅಂತಾ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ಆರೋಪಿ ನನಗೆ ಮು.ಮಾ.1 ರಿಂದ ಹೊಡೆದಿಲ್ಲ ಎಂದರೆ ಸರಿ. ನಮ್ಮ ಮನೆಯ ಮುಂದಿನ ರಸ್ತೆ ಕಚ್ಚಾ ರಸ್ತೆ ಎಂದರೆ ಸರಿ. ಅಲ್ಲಿ ಸಾಕಷ್ಟು ಕಲ್ಲುಗಳ ಬಿದ್ದಿರುತ್ತವೆ ಎಂದರೆ ಸರಿ. ನಾನು ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.1 ರ ಮೇಲೆ ರಕ್ತದ ಕಲೆ ಇರುವುದಿಲ್ಲ ಎಂದರೆ ಸರಿ. ಮು.ಮಾ.1 ಚೂಪಾದ ಕಲ್ಲು ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಗುನ್ನಾ ಸ್ಥಳದ ಪಂಚನಾಮೆಯ ಮೇಲಿರುವ ಕೈ ನಕ್ಷೆಯನ್ನು ತೋರಿಸಿ ಆರೋಪಿ ಪರ ವಕೀಲರು ಗುನ್ನಾ ಸ್ಥಳವನ್ನು ಗುರುತು ಹಿಡಿಯುವಂತೆ ಕೇಳಿದ್ದು, ಸಾಕ್ಷಿ ಅದು ಗುನ್ನಾ ಸ್ಥಳ ಅಲ್ಲ ಎಂದು ನುಡಿಯುತ್ತಾರೆ. ಪೊಲೀಸರು ನನ್ನ ಮುಂದೆ ಪಂಚನಾಮೆ ಮಾಡಿಲ್ಲ. ಪಂಚನಾಮೆ ಮಾಡುವಲ್ಲಿ ಘಟನೆಯಾದ ಸಮಯದಿಂದ ಸುಮಾರು 12 ಗಂಟೆಗಳ ಕಾಲ ಗತಿಸಿಹೋಗಿರುತ್ತದೆ ಎಂದರೆ ಸರಿ. ನಮ್ಮ ಏರಿಯಾದಲ್ಲಿ ಹೋಗಿ-ಬಂದು ಮಾಡುವ ಜನರು ಸಾಕಷ್ಟು ಇರುತ್ತಾರೆ ಎಂದರೆ ಸರಿ. ಮು.ಮಾ.1 ಕಲ್ಲು ಸ್ಥಳದಲ್ಲಿಯೇ ಇರುತ್ತದೆ ಎಂದು ಹೇಳುವ ಯಾವುದೇ ಗ್ಯಾರಂಟಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದೂರಿನ ಮೇಲೆ ಹೆಬ್ಬೆಟ್ಟಿನ ಗುರುತು ಮತ್ತು ಸಹಿಯನ್ನು ಮಾಡಿರುತ್ತೇನೆ. ಆರೋಪಿ ನನಗೆ ಖಲ್ಲಾಸ ಮಾಡುತ್ತೇನೆ ಅಂತಾ ಅನ್ನುವಾಗ ಬೇರೆ ಯಾರು ಇರಲಿಲ್ಲ. ರಾಜಶ್ರೀ, ಪರಮೇಶ ಮತ್ತು ಶಾಂತಮ್ಮ ಇವರು ನನಗೆ ಆರೋಪಿ ಹೊಡೆದ ಮೇಲೆ

ಬಂದಿರುತ್ತಾರೆ. ನನಗೆ ಆರೋಪಿ ಹೊಡೆಯುವಾಗ ನಾನು, ಸುಭಾಶ ಮಾತ್ರ ಇದ್ದೇವು ಎಂದರೆ ಸಾಕ್ಷಿ ಸುಭಾಶ ಹೋಗಿದ್ದ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಯಾವುದೇ ಘಟನೆಯಾಗಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ಮೇಲೆ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ದವಾಖಾನೆ ರೀಪೊರ್ಟದಲ್ಲಿ ಕಣ್ಣಿನ ಬಗ್ಗೆ ಯಾವುದೇ ವರದಿ ಬರೆದಿಲ್ಲ ಎಂದರೆ ಸರಿಯಲ್ಲ. ಸದರಿ ರೀಪೊರ್ಟದಲ್ಲಿ ಕಣ್ಣಿಗೆ ಹೊಡೆದ ಬಗ್ಗೆ ಬರೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ತನ್ನ ಹೆಂಡತಿಯೊಂದಿಗೆ ಜಗಳವಾಡುತ್ತಿದ್ದ ಎಂದು ದೂರಿನಲ್ಲಿ ಎಲ್ಲಿಯೂ ಕಾಣಿಸಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿ ಮತ್ತು ಆತನ ಹೆಂಡತಿಯ ಜಗಳ ಆಗಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಗಳ ಆದ ನಂತರ ಸುಭಾಶ ಅಲ್ಲಿಯೇ ಇದ್ದನೇ ಎಂಬ ಪ್ರಶ್ನೆಗೆ ಸಾಕ್ಷಿ ಸುಭಾಶ ಸ್ಥಳದಲ್ಲಿ ಬಂದೇ ಇಲ್ಲ ಎಂದು ನುಡಿಯುತ್ತಾರೆ. ಹಾಗೇ ಸುಭಾಶ ಇತನ ಹೆಂಡತಿಯ ಸಂಗಡ ಜಗಳ ಆಗಿರುವ ಬಗ್ಗೆ ನಾನು ದೂರಿನಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ಧ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH